ನರೇಂದ್ರ ಸಿಂಗ್ ತೋಮರ್
ಕೃಷಿ ಮತ್ತು ರೈತ ಕಲ್ಯಾಣ ಸಚಿವರು
ಭಾರತ ಸರ್ಕಾರ

सत्यमेव जयते

ಡಿಸೆಂಬರ್ 17, 2020

# ರೈತ ಸಹೋದರರು ಮತ್ತು ಸಹೋದರಿಯರಿಗೆ ಪತ್ರ

**ಆತ್ಮೀಯ ರೈತ ಸಹೋದರ ಮತ್ತು ಸಹೋದರಿಯರೇ,**

ಐತಿಹಾಸಿಕ ಕೃಷಿ ಸುಧಾರಣೆಗಳಿಗೆ ಸಂಬಂಧಿಸಿದಂತೆ ಕಳೆದ ಕೆಲವು ದಿನಗಳಿಂದ ನಾನು ನಿಮ್ಮೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಈ ಹಿಂದೆ ನಾನು ಅನೇಕ ರಾಜ್ಯಗಳ ರೈತ ಸಂಘಟನೆಗಳೊಂದಿಗೆ ಮಾತುಕತೆ ನಡೆಸಿದ್ದೇನೆ. ಅನೇಕ ರೈತ ಸಂಘಟನೆಗಳು ಈ ಕೃಷಿ ಸುಧಾರಣೆಗಳನ್ನು ಸ್ವಾಗತಿಸಿವೆ, ಅವರು ಅದರ ಬಗ್ಗೆ ತುಂಬಾ ಸಂತೋಷಪಟ್ಟಿದ್ದಾರೆ. ರೈತರಲ್ಲಿ ಹೊಸ ಭರವಸೆ ಹುಟ್ಟಿಕೊಂಡಿದೆ. ದೇಶದ ವಿವಿಧ ಪ್ರದೇಶಗಳ ರೈತರು ಹೊಸ ಕೃಷಿ ಕಾನೂನುಗಳ ಲಾಭ ಪಡೆಯಲು ಪ್ರಾರಂಭಿಸಿದ ಉದಾಹರಣೆಗಳೂ ಇವೆ.

ಆದರೆ ಈ ಕೃಷಿ ಸುಧಾರಣೆಗಳ ಬಗ್ಗೆ ಹರಡಿರುವ ವದಂತಿಯೆಂದರೆ ಇದರ ಬಗ್ಗೆ ಕೆಲ ರೈತ ಸಂಘಟನೆಗಳಲ್ಲಿ ಅವುಗಳ ಬಗ್ಗೆ ಗೊಂದಲವನ್ನು ಹುಟ್ಟುಹಾಕಲಾಗಿದೆ.

ದೇಶದ ಕೃಷಿ ಸಚಿವನಾಗಿ, ಪ್ರತಿಯೊಬ್ಬ ರೈತನ ಭ್ರಮೆಯನ್ನು ದೂರ ಮಾಡುವುದು, ಪ್ರತಿಯೊಬ್ಬ ರೈತನ ಚಿಂತೆಯನ್ನು ದೂರ ಮಾಡುವುದು ನನ್ನ ಕರ್ತವ್ಯ. ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಸರ್ಕಾರ ಮತ್ತು ರೈತರ ನಡುವೆ ಸುಳ್ಳಿನ ಗೋಡೆಯನ್ನು ನಿರ್ಮಿಸುವ ಸಂಚು ನಡೆಯುತ್ತಿದೆ, ಅದರ ಸತ್ಯಾಸತ್ಯತೆ ಹಾಗೂ ನಿಜವಾದ ವಸ್ತುಸ್ಥಿತಿ ನಿಮ್ಮ ಮುಂದೆ ಇರಿಸುವುದು ನನ್ನ ಜವಾಬ್ದಾರಿಯಾಗಿದೆ.

ನಾನು ರೈತರ ಕುಟುಂಬದಿಂದ ಬಂದಿದ್ದೇನೆ. ಕೃಷಿಯ ಸೂಕ್ಷ್ಮತೆಗಳು ಮತ್ತು ಕೃಷಿಯ ಸವಾಲುಗಳೆರಡನ್ನು ನೋಡುತ್ತ, ಅರ್ಥ ಮಾಡಿಕೊಳ್ಳುತ್ತ ಬೆಳೆದಿದ್ದೇನೆ. ಹೊಲಕ್ಕೆ ನೀರು ಹಾಯಿಸಲು ತಡರಾತ್ರಿಯವರೆಗೆ ಎಚ್ಚರವಾಗಿರುವುದು, ನೀರು ಹಾಯಿಸುವಾಗ ಕಟ್ಟೆ ಒಡೆದಾಗ ಅದನ್ನು ಮುಚ್ಚಲು ಓಡುವುದು, ಅಕಾಲಿಕ ಮಳೆಯ ಭಯ, ಸಕಾಲಿಕ ಮಳೆಯ ಸಂತೋಷ – ಇವೆಲ್ಲವೂ ನನ್ನ ಜೀವನದ ಒಂದು ಭಾಗವಾಗಿವೆ. ಬೆಳೆದ ಫಸಲಿನ ಕಟಾವಿನ ನಂತರ ಬೆಳೆಯ ಮಾರಾಟಕ್ಕೆ ವಾರಗಳವರೆಗೆ ಕಾಯುವುದು ಕೂಡ ನಾನು ನೋಡಿದ್ದೇನೆ.

ಇಂತಹ ಪರಿಸ್ಥಿತಿಗಳು ಮತ್ತು ಸನ್ನಿವೇಶಗಳ ಮಧ್ಯೆಯೂ, ದೇಶದ ರೈತ ದೇಶಕ್ಕೆ ಗರಿಷ್ಠ ಆಹಾರವನ್ನು ಉತ್ಪಾದಿಸಲು ಶ್ರಮಿಸುತ್ತಾನೆ. ಭಾರತದ ರೈತರ ಈ ಕಠಿಣ ಪರಿಶ್ರಮವನ್ನು, ಈ ಇಚ್ಛಾಶಕ್ತಿಯನ್ನು ನಾವು ಕೊರೋನಾದ ಸಂದರ್ಭದಲ್ಲಿ ನೋಡಿದ್ದೇವೆ. ರೈತರು ಬಂಪರ್ ಬೆಳೆಯನ್ನು ಉತ್ಪಾದಿಸುವ ಮೂಲಕ ದೇಶದ ಆರ್ಥಿಕತೆಗೆ ವೇಗ ನೀಡಲು ಸಹಾಯ ಮಾಡಿದ್ದಾರೆ. ಇದರ ಮಧ್ಯೆ ದಾಖಲೆಯ ಬಿತ್ತನೆ ಮಾಡಿ ಭವಿಷ್ಯದಲ್ಲಿ ಉತ್ತಮ ಇಳುವರಿಯನ್ನು ಖಾತ್ರಿಪಡಿಸಿದ್ದಾರೆ.

ಕೃಷಿ ಸಚಿವನಾಗಿ ನನಗೆ ಅತ್ಯಂತ ಸಂತೋಷದ ಸಂಗತಿ ಎಂದರೆ, ಹೊಸ ಕೃಷಿ ಕಾನೂನು ಜಾರಿಗೆ ಬಂದ ನಂತರ, ಈ ಬಾರಿ ಕನಿಷ್ಟ ಬೆಂಬಲ ಬೆಲೆ (MSP) ಯಲ್ಲಿ ಸರ್ಕಾರಿ ಖರೀದಿಯು ಈ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿದೆ. ನಮ್ಮ ಸರ್ಕಾರವು MSP ಯಲ್ಲಿ ಖರೀದಿಯ ಹೊಸ ದಾಖಲೆಗಳನ್ನು ನಿರ್ಮಿಸುತ್ತಿರುವ, ಖರೀದಿ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸುತ್ತಿರುವ ಈ ಸಂದರ್ಭದಲ್ಲಿ, ಕೆಲವರು ಎಂಎಸ್‌ಪಿಯನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂದು ರೈತರಿಗೆ ಸುಳ್ಳು ಹೇಳುತ್ತಿದ್ದಾರೆ.

ರಾಜಕೀಯ ಸ್ವಾರ್ಥದಿಂದ ಪ್ರೇರೇಪಿಸಲ್ಪಟ್ಟ ಕೆಲವು ಜನರು ಹರಡುತ್ತಿರುವ ಈ ಹಸಿ ಸುಳ್ಳನ್ನು ಅರಿತುಕೊಳ್ಳಬೇಕು ಮತ್ತು ಅದನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಎಂದು ನಾನು ರೈತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾವ ಸರ್ಕಾರ ರೈತರಿಗೆ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಹೆಚ್ಚು MSP ನೀಡಿದೆಯೋ, ಯಾವ ಸರ್ಕಾರ ಕಳೆದ ಆರು ವರ್ಷಗಳಲ್ಲಿ MSP ಮೂಲಕ ಅಂದಾಜು ಎರಡು ಪಟ್ಟಷ್ಟು ಹಣವನ್ನು ರೈತರ ಖಾತೆಗಳಲ್ಲಿ ಜಮಾ ಮಾಡಿದೆಯೋ ಆ ಸರ್ಕಾರ MSP ಯನ್ನು ಎಂದಿಗೂ ರದ್ದು ಮಾಡುವುದಿಲ್ಲ. MSP ಚಾಲ್ತಿಯಲ್ಲಿದೆ ಹಾಗೆ ಮುಂದೆಯೂ ಇರಲಿದೆ.

| ಸುಳ್ಳು | ಸತ್ಯ |
|---|---|
| MSP ವ್ಯವಸ್ಥೆ ಕೊನೆಗೊಳ್ಳುತ್ತಿದೆ. ಎಪಿಎಂಸಿ ಮಾರುಕಟ್ಟೆಗಳನ್ನು ಮುಚ್ಚಲಾಗುತ್ತಿದೆ. | MSP ವ್ಯವಸ್ಥೆ ಚಾಲ್ತಿಯಲ್ಲಿದೆ ಮತ್ತು ಮುಂದುವರಿಯುತ್ತದೆ. ಎಪಿಎಂಸಿ ಮಾರುಕಟ್ಟೆಗಳು ಮುಂದುವರಿಯಲಿವೆ. ಎಪಿಎಂಸಿ ಮಾರುಕಟ್ಟೆಗಳು ಈ ಕಾನೂನಿನ ವ್ಯಾಪ್ತಿಗೆ ಬರುವುದಿಲ್ಲ. |
| ರೈತರ ಜಮೀನು ಅಪಾಯದಲ್ಲಿದೆ. | ಒಪ್ಪಂದಗಳು ಬೆಳೆಗಳಿಗೆ ಮಾತ್ರ ಸೀಮಿತವಾಗಿರುತ್ತವೆ, ಭೂಮಿಗೆ ಅಲ್ಲ. ಮಾರಾಟ, ಗುತ್ತಿಗೆ ಮತ್ತು ಅಡಮಾನ ಸೇರಿದಂತೆ ಯಾವುದೇ ರೀತಿಯ ಭೂಮಿಯನ್ನು ವರ್ಗಾವಣೆ ಮಾಡಲು ಯಾವುದೇ ಒಪ್ಪಂದ ಇರುವುದಿಲ್ಲ. |
| ರೈತರ ಮೇಲಿನ ಯಾವುದೇ ರೀತಿಯ ಬಾಕಿ ಹಣದ ವಸೂಲಿಗೆ ಗುತ್ತಿಗೆದಾರರು ಜಮೀನು ವಶಪಡಿಸಿಕೊಳ್ಳಬಹುದು. | ಪರಿಸ್ಥಿತಿ ಏನೇ ಇರಲಿ, ರೈತರ ಭೂಮಿ ಸುರಕ್ಷಿತವಾಗಿದೆ. |
| ಗುತ್ತಿಗೆ ಕೃಷಿಯ ಸಂದರ್ಭದಲ್ಲಿ ರೈತರಿಗೆ ಬೆಲೆ ಗ್ಯಾರಂಟಿ ಇಲ್ಲ. | ಕೃಷಿ ಉತ್ಪನ್ನಗಳ ಖರೀದಿ ಬೆಲೆಯನ್ನು ಕೃಷಿ ಒಪ್ಪಂದದಲ್ಲಿ ದಾಖಲಿಸಲಾಗುತ್ತದೆ. |
| ರೈತರಿಗೆ ಹಣ ಪಾವತಿಸಲಾಗುವುದಿಲ್ಲ. | ರೈತರಿಗೆ ನಿಗದಿತ ಸಮಯದೊಳಗೆ ಹಣ ಪಾವತಿಸಬೇಕಾಗುತ್ತದೆ, ಇಲ್ಲದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಮತ್ತು ದಂಡ ವಿಧಿಸಲಾಗುತ್ತದೆ. |
| ರೈತರು ಒಪ್ಪಂದಗಳನ್ನು ರದ್ದುಗೊಳಿಸುವಂತಿಲ್ಲ. | ರೈತರು ಯಾವುದೇ ಸಮಯದಲ್ಲಿ ಯಾವುದೇ ದಂಡವಿಲ್ಲದೇ ಒಪ್ಪಂದವನ್ನು ಕೊನೆಗೊಳಿಸಬಹುದು. |
| ಕಾಂಟ್ರ್ಯಾಕ್ಟ್ ಫಾರ್ಮಿಂಗ್ (ಗುತ್ತಿಗೆ ಕೃಷಿ)ಯನ್ನು ಈ ಹಿಂದೆ ಪ್ರಯತ್ನಿಸಲಾಗಿಲ್ಲ. | ಅನೇಕ ರಾಜ್ಯಗಳು ಕಾಂಟ್ರ್ಯಾಕ್ಟ್ ಫಾರ್ಮಿಂಗ್ (ಗುತ್ತಿಗೆ ಕೃಷಿ)ಯನ್ನು ಅನುಮೋದಿಸಿವೆ. ಅನೇಕ ರಾಜ್ಯಗಳು ಕಾಂಟ್ರ್ಯಾಕ್ಟ್ ಫಾರ್ಮಿಂಗ್ ಕಾನೂನುಗಳನ್ನು ಸಹ ಹೊಂದಿವೆ. |
| ಈ ಕಾನೂನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಮಾಲೋಚನೆ ಅಥವಾ ಚರ್ಚೆ ನಡೆಸಲಾಗಿಲ್ಲ. | ಎರಡು ದಶಕಗಳ ಕಾಲ ಈ ಕಾಯ್ದೆಗಳ ಬಗ್ಗೆ ಚರ್ಚೆ ನಡೆದಿದೆ. ಶಂಕರ ಲಾಲ್ ಗುರು ಸಮಿತಿ ರಚಿಸಿದಾಗಿನಿಂದ ಈ ಕುರಿತು ಚರ್ಚೆ ಆರಂಭವಾಗಿದೆ. ಅಲ್ಲಿಂದೀಚೆಗೆ ಮಾದರಿ ಎಪಿಎಂಸಿ ಕಾಯ್ದೆ 2003, 2007ರಲ್ಲಿ ಎಪಿಎಂಸಿ ನಿಯಮ, 2010ರಲ್ಲಿ ಹರ್ಯಾಣ, ಪಂಜಾಬ್, ಬಿಹಾರ್ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿಗಳ ಸಮಿತಿ, 2013 ರಲ್ಲಿ 10 ರಾಜ್ಯಗಳ ಕೃಷಿ ಸಚಿವರುಗಳ ಸಮಿತಿ, 2017 ರಲ್ಲಿ ಮಾದರಿ ಎ.ಪಿ.ಎಲ್.ಎಂ. ಕಾಯ್ದೆ ಮತ್ತು ಅಂತಿಮವಾಗಿ ಸಂಸತ್ತಿನಲ್ಲಿ 2020ರಲ್ಲಿ ಕಾಯ್ದೆಗಳ ಅನುಮೋದನೆಗೊಂಡಿದೆ. |

ರೈತರ ಸಹೋದರ ಮತ್ತು ಸಹೋದರಿಯರೇ,

ರೈತರ ಕಲ್ಯಾಣವು ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಜೀವನದ ಪ್ರಮುಖ ಬದ್ಧತೆಗಳಲ್ಲಿ ಒಂದಾಗಿದೆ. ರೈತರ ಆದಾಯ ವೃದ್ಧಿ, ಅವರ ಜೀವನದಲ್ಲಿ ಸಮೃದ್ಧಿ ತರಲು ಪ್ರಧಾನಮಂತ್ರಿಯವರ ನೇತೃತ್ವದಲ್ಲಿ, ಈ ಸರ್ಕಾರವು ನಿರಂತರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದೆ.

ನಮ್ಮ ಸರ್ಕಾರವು ಕಳೆದ 6 ವರ್ಷಗಳಲ್ಲಿ ರೈತರನ್ನು ಸಶಕ್ತಗೊಳಿಸಲು ಬೀಜದಿಂದ ಹಿಡಿದು ಮಾರುಕಟ್ಟೆಯವರೆಗೆ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದೆ. ಇದರಿಂದ ರೈತರ ಕೃಷಿ ಇನ್ನಷ್ಟು ಸುಲಲಿತವಾಗಿದೆ, ಕೃಷಿಕರ ಕಷ್ಟಗಳನ್ನು ತಗ್ಗಿಸಿದೆ ಹಾಗೂ ಲಾಭವನ್ನು ಹೆಚ್ಚಿಸಿದೆ.

ನಮ್ಮ ದೇಶದ ಶೇಕಡಾ 80 ರಷ್ಟು ರೈತರು ಸಣ್ಣ ರೈತರಾಗಿದ್ದು ಒಂದು ಅಥವಾ ಎರಡು ಎಕರೆ ಪ್ರದೇಶವನ್ನು ಹೊಂದಿರುತ್ತಾರೆ ಎಂಬುದು ತಮಗೂ ತಿಳಿದೇ ಇದೆ. ಅಂತಹ ರೈತರು ಸ್ವಾತಂತ್ರ್ಯ ಬಂದಾಗಿನಿಂದಲೂ ಕೇವಲ ತಮ್ಮ ಹೊಟ್ಟೆಪಾಡಿಗಾಗಿ ಕೃಷಿ ಮಾಡುತ್ತಿದ್ದಾರೆ. ಸರ್ಕಾರ ಕೈಗೊಂಡ ಕ್ರಮಗಳಿಂದ ಅಂತಹ ಸಣ್ಣ ರೈತರಿಗೆ ಭಾರಿ ಲಾಭವಾಗುತ್ತಿದೆ.

ಕಷ್ಟ ಕಾಲದ ಸಂದರ್ಭದಲ್ಲಿ ನೀವು ಸಾಲ ಮಾಡದಿರಲಿ ಎಂಬ ಉದ್ದೇಶದಿಂದ ಪಿಎಂ ಕಿಸಾನ್ ಸಮ್ಮಾನ್ ನಿಧಿ ಮೂಲಕ ವಾರ್ಷಿಕವಾಗಿ 6 ಸಾವಿರ ರೂಪಾಯಿಗಳನ್ನು ನಿಮಗೆ ನೀಡಲಾಗುತ್ತಿದೆ. ಬೆಳೆ ವಿಮೆಯ ಕವಚ ನೈಸರ್ಗಿಕ ವಿಕೋಪದಿಂದಾಗುವ ಬೆಳೆ ನಾಶದ ಹಾನಿಯನ್ನು ಸರಿದೂಗಿಸುತ್ತದೆ.

ಸಾಯಿಲ್ ಹೆಲ್ತ್ ಕಾರ್ಡ್‌ನಿಂದ ರೈತನಿಗೆ ತನ್ನ ಜಮೀನಿನ ಆರೋಗ್ಯ ಸ್ಥಿತಿಯ ಬಗ್ಗೆ ಸರಿಯಾದ ಮಾಹಿತಿ ತಿಳಿಯುತ್ತಿದೆ. ನೀಮ್ ಲೇಪಿತ ಯೂರಿಯಾ ಗೊಬ್ಬರದ ಕಾಳಸಂತೆಯ ಮೇಲೆ ಲಗಾಮು ಹಾಕುವುದರ ಮೂಲಕ ರೈತರಿಗೆ ನೆಮ್ಮದಿ ನೀಡಿದೆ. ಅನ್ನದಾತ ಶಕ್ತಿದಾತನೂ ಆಗಬೇಕು, ದೇಶ ಈ ಲಕ್ಷ್ಯದೊಂದಿಗೆ ಮುನ್ನಡೆಯುತ್ತಿದೆ.

ರೈತರು ಎದುರಿಸುತ್ತಿರುವ ಒಂದು ಸಮಸ್ಯೆಯೆಂದರೆ ಹೆಚ್ಚಿನ ಗೋದಾಮುಗಳು, ಕೋಲ್ಡ್ ಸ್ಟೋರೇಜ್ ಮತ್ತು ಸಂಸ್ಕರಣಾ ಕೇಂದ್ರಗಳು ಹಳ್ಳಿಗಳಿಗಿಂತ ದೊಡ್ಡ ನಗರಗಳಲ್ಲಿವೆ. ಇದರಿಂದಾಗಿ ರೈತರು ಇವುಗಳ ಸಂಪೂರ್ಣ ಲಾಭ ಪಡೆಯಲಾಗುತ್ತಿಲ್ಲ. ಈ ಅಸಮತೋಲನವನ್ನು ನಿವಾರಿಸಲು, ಈಗ 1 ಲಕ್ಷ ಕೋಟಿ ರೂ.ಗಳ ಕೃಷಿ ಮೂಲಸೌಕರ್ಯ ನಿಧಿಯನ್ನು ರಚಿಸಲಾಗಿದೆ.

ಈ ಪ್ರಯತ್ನಗಳ ಮಧ್ಯೆ, ರೈತರು ಬೆವರು ಹರಿಸಿ ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಯ ಲಭ್ಯತೆಯ ಕೊರತೆಯಿಂದಾಗಿ ಕೆಲವರು ಅದಕ್ಕೇನೂ ಬೆಲೆ ಇಲ್ಲದಂತೆ ಕಡಿಮೆ ಹಣಕ್ಕೆ ಹೇಗೆ ಖರೀದಿಸುತ್ತಿದ್ದರು ಎಂಬುದನ್ನು ನಾವು ನೋಡಿದ್ದೇವೆ. ಭಾರತದ ರೈತನಿಗೆ ತನ್ನ ಹೊಲದಲ್ಲಿ ಬೆಳೆದ ಉತ್ಪನ್ನಗಳ ಬೆಲೆಯನ್ನು ನಿಗದಿಪಡಿಸುವ, ತನಗೆ ಬೇಕಾದ ಕಡೆ ಮಾರಾಟ ಮಾಡುವ ಹಕ್ಕು ಕೂಡ ಇರಲಿಲ್ಲ.

ರೈತರ ಅಸಹಾಯಕತೆಯನ್ನು ಎಲ್ಲರೂ ತಿಳಿದುಕೊಂಡಿದ್ದರು, ಅರ್ಥ ಮಾಡಿಕೊಂಡಿದ್ದರು. ಈ ಹಿಂದೆ ಇದ್ದ ಸರ್ಕಾರಗಳು ಕೂಡ ರೈತರಿಗೆ ಮಂಡಿಯೊಂದಿಗೆ ಮುಕ್ತ ಮಾರುಕಟ್ಟೆಯನ್ನು ಒದಗಿಸುವುದರ ಪರ ಮಾತನಾಡುತ್ತಿದ್ದವು. ಈ ಬಗ್ಗೆ ಅಟಲ್ ಜೀ ಅವರ ಸರ್ಕಾರದ ಸಮಯದಲ್ಲಿ 2001 ರಲ್ಲಿ ಸಂವಾದ ಪ್ರಕ್ರಿಯೆಯು ಪ್ರಾರಂಭವಾಯಿತು. ಅಟಲ್ ಜೀ ಸರ್ಕಾರದ ನಂತರ, ಕೇಂದ್ರದಲ್ಲಿ 10 ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರವಿತ್ತು ಮತ್ತು ಅವರು ಕೂಡ ಈ ಸುಧಾರಣೆಗಳನ್ನು ಬೆಂಬಲಿಸುತ್ತಿದ್ದರು, ಈ ಸುಧಾರಣೆಗಳ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ಕೂಡ ಉಲ್ಲೇಖಿಸುತ್ತಾ ಬಂದಿದ್ದಾರೆ.

ಸತ್ಯವೇನೆಂದರೆ, ರೈತರನ್ನು ಕಟ್ಟಿ ಹಾಕುವ ಹಳೆಯ ವ್ಯವಸ್ಥೆಯ ಬಗ್ಗೆ ಯಾರಿಗೂ ಒಪ್ಪಿಗೆ ಇರಲಿಲ್ಲ. ಇಂದು, ಕಳೆದ 20–25 ವರ್ಷಗಳಲ್ಲಿ, ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಇತರ ಆಯ್ಕೆಗಳು ಇರಬಾರದು. ಈಗ ಇರುವ ವ್ಯವಸ್ಥೆಯೇ ಸರಿಯಾಗಿದೆ ಎಂದು ಹೇಳಿರುವ ಯಾವುದೇ ರೈತ ಮುಖಂಡ ಅಥವಾ ಸಂಘಟನೆಯ ಯಾವುದೇ ಹೇಳಿಕೆಯನ್ನು ನೀವು ತೋರಿಸಬೇಕೆಂದು ಈ ಪತ್ರದ ಮೂಲಕ ಕೇಳಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ, ದೊಡ್ಡ ರೈತ ಸಂಘಟನೆಗಳು ಈ ಬಂಧನಗಳಿಂದ ಮುಕ್ತರಾಗಲು ಧರಣಿ ಮಾಡುತ್ತಿದ್ದವು. ಈ ಸುಧಾರಣೆಗಳಿಲ್ಲದೆ ಭಾರತದ ರೈತನ ಜೀವನವನ್ನು ಬದಲಾಯಿಸುವುದು ಕಷ್ಟ ಎಂದು ಕೃಷಿ ತಜ್ಞರು ಹೇಳುತ್ತಿದ್ದರು.

2014 ರಲ್ಲಿ ಎನ್‌ಡಿಎ ಸರ್ಕಾರ ರಚನೆಯಾದಾಗ, ನಾವು ಈ ಸುಧಾರಣೆಗಳ ಕುರಿತಾಗಿ ಹೊಸದಾಗಿ ಚರ್ಚಿಸಲು ಪ್ರಾರಂಭಿಸಿದೆವು. ರಾಜ್ಯ ಸರ್ಕಾರಗಳಿಗೆ ಮಾದರಿ ಕಾನೂನುಗಳನ್ನು ಕಳುಹಿಸಿಕೊಡಲಾಯಿತು. ಮುಖ್ಯಮಂತ್ರಿಗಳ ಸಮಿತಿಗಳಲ್ಲಿ ಇದರ ಬಗ್ಗೆ ಚರ್ಚೆ ನಡೆಯಿತು. ಆರು ತಿಂಗಳಲ್ಲಿ ನಾವು ಈ ವಿಷಯವನ್ನು ದೇಶದ ಕೋಟ್ಯಂತರ ರೈತರ ಬಳಿ ತೆಗೆದುಕೊಂಡು ಹೋಗಿದ್ದೇವೆ. ಸುಮಾರು 1.5 ಲಕ್ಷ ತರಬೇತಿ ಮತ್ತು ವೆಬಿನಾರ್ ಸೆಷನ್ ಮೂಲಕ ರೈತರಿಗೆ ಸಂಬಂಧಿಸಿದ ವಿವಿಧ ವಿಷಯಗಳು ಮತ್ತು ಹೊಸ ಕೃಷಿ ಕಾನೂನಿನ ನಿಬಂಧನೆಗಳ ಬಗ್ಗೆ ಚರ್ಚಿಸಿದ್ದೇವೆ. ಆ ನಂತರವೇ, ಈ ಹೊಸ ಕೃಷಿ ಕಾನೂನುಗಳು ಅಸ್ತಿತ್ವಕ್ಕೆ ಬಂದವು.

**ರೈತ ಸಹೋದರ ಮತ್ತು ಸಹೋದರಿಯರೇ,**

ಮಂಡಿಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಮುಂದೆಯೂ ಕಾರ್ಯನಿರ್ವಹಿಸುತ್ತವೆ. ಎಪಿಎಂಸಿಯನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ. ಇದರೊಂದಿಗೆ, ಮುಕ್ತ ಮಾರುಕಟ್ಟೆಯು ರೈತರಿಗೆ ಉತ್ಪನ್ನಗಳನ್ನು ಅವರ ಮನೆಯಲ್ಲಿಯೇ ಉತ್ತಮ ಬೆಲೆಗೆ ಮಾರಾಟ ಮಾಡುವ ಆಯ್ಕೆಯನ್ನು ಸಹ ನೀಡುತ್ತದೆ. ಜೊತೆಯಲ್ಲಿ, ಜಮೀನಿನಿಂದ ಮಂಡಿಗೆ ಉತ್ಪನ್ನವನ್ನು ಸಾಗಿಸುವ ಸರಕು ಸಾಗಣೆಯ ವೆಚ್ಚವೂ ಉಳಿಯಲಿದೆ. ಅಲ್ಲದೇ, ಮಾರುಕಟ್ಟೆಯ ಪರ್ಯಾಯವಂತು ಇದ್ದೇ ಇದೆ. ಕೃಷಿ ಉತ್ಪನ್ನ ಮಾರುಕಟ್ಟೆಗಳು ಮೊದಲಿನಂತೆ ಕಾರ್ಯನಿರ್ವಹಿಸುತ್ತಲೇ ಇರುತ್ತವೆ. ಕಳೆದ 5–6 ವರ್ಷಗಳಲ್ಲಿ ಕೃಷಿ ಮಾರುಕಟ್ಟೆಗಳನ್ನು ಆಧುನೀಕರಿಸಲು ಸರ್ಕಾರ ಕೋಟ್ಯಂತರ ರೂಪಾಯಿಗಳನ್ನು ವ್ಯಯಿಸಿದೆ. ಮುಂಬರುವ ದಿನಗಳಲ್ಲಿ ಇವುಗಳನ್ನು ಮತ್ತಷ್ಟು ಆಧುನೀಕರಿಸಲಾಗುತ್ತದೆ.

ಯಾರ ರಾಜಕೀಯ ನೆಲೆ ಕುಸಿದು ಹೋಗಿದೆಯೋ ಅಂತಹವರು ರೈತರ ಭೂಮಿಯನ್ನು ಕಸಿದುಕೊಳ್ಳಲಾಗುತ್ತದೆ ಎಂಬ ಸಂಪೂರ್ಣ ಕಾಲ್ಪನಿಕ ಸುಳ್ಳನ್ನು ಹರಡುತ್ತಿದ್ದಾರೆ. ರೈತ ಮತ್ತು ವ್ಯಾಪಾರಿ ನಡುವಿನ ಒಪ್ಪಂದವು ಕೇವಲ ಉತ್ಪನ್ನದ ಬಗ್ಗೆ ಮಾತ್ರ ಇದೆ, ಹೀಗಿದ್ದಾಗ ಭೂಮಿಯನ್ನು ಕಸಿದುಕೊಳ್ಳಲು ಹೇಗೆ ಸಾಧ್ಯ ? ರೈತನೇ ಜಮೀನಿನ ಮಾಲಿಕತ್ವ ಹೊಂದಿರುತ್ತಾನೆ ಎಂದು ಹೊಸ ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಯಾವ ಸರ್ಕಾರ ಹಳ್ಳಿಗಳಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಕುಟುಂಬಕ್ಕೆ ಸ್ವಾಮಿತ್ವ ಯೋಜನೆ ಅಡಿಯಲ್ಲಿ ಮನೆಯ ಮಾಲಿಕತ್ವದ ಅಧಿಕಾರ ನೀಡುತ್ತಿದೆಯೋ, ಅಂತಹ ಸರ್ಕಾರ ರೈತರ ಒಂದಿಂಚು ಜಮೀನನ್ನು ಕೂಡ ಕಸಿದುಕೊಳ್ಳಲು ಯಾರಿಗೂ ಅವಕಾಶ ನೀಡಲಾರದು.

ನಮ್ಮ ಸರ್ಕಾರ ಪ್ರಾಮಾಣಿಕತೆ ಮತ್ತು ನೀತಿಗಳಿಂದ ರೈತರಿಗೆ ಬದ್ಧವಾಗಿದೆ.

**ಸಹೋದರಿಯರು ಮತ್ತು ಸಹೋದರರೇ,**

ಕನಿಷ್ಠ ಬೆಂಬಲ ಬೆಲೆ, ಮಾರುಕಟ್ಟೆ ಮತ್ತು ಭೂ ವಶಪಡಿಸಿಕೊಳ್ಳುವಿಕೆಯ ಬಗ್ಗೆ ಹರಡಿಸಲಾಗುತ್ತಿರುವ ಯಾವುದೇ ಗೊಂದಲಗಳನ್ನು ದೂರ ಮಾಡಲು ಸರ್ಕಾರ ನಿರಂತರವಾಗಿ ಪ್ರಯತ್ನ ಮಾಡುತ್ತಿದೆ.

ನಾವು ರೈತರು ಮತ್ತು ಅವರ ಸಂಘಟನೆಗಳೊಂದಿಗೆ ನಿರಂತರವಾಗಿ ಚರ್ಚೆ ನಡೆಸುತ್ತಿದ್ದೇವೆ ಮತ್ತು ಅವರ ಸಮಸ್ಯೆಗಳನ್ನು ಪರಿಹರಿಸಲು ಎಲ್ಲಾ ಸಮಯದಲ್ಲೂ ಸಿದ್ಧರಿದ್ದೇವೆ.

ಆದರೆ ರೈತರ ಸೋಗಿನಲ್ಲಿ ಕೆಲವು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ರಚಿಸಿದ ಗೊಂದಲದ ಸುಳಿಯನ್ನು ಅರ್ಥಮಾಡಿಕೊಳ್ಳುವುದು ಅಷ್ಟೇ ಮುಖ್ಯವಾಗಿದೆ.

ದೇಶದ ದುರಾದೃಷ್ಟವೆಂದರೆ, ತಮ್ಮನ್ನು ತಟಸ್ಥರೆಂದು ಪರಿಗಣಿಸುವ, ತಮ್ಮನ್ನು ಬುದ್ಧಿಜೀವಿಗಳೆಂದು ಪರಿಗಣಿಸುವ ಕೆಲವರು ನಾಚಿಕೆಯಿಲ್ಲದೇ ತಾವೇ ಹೇಳಿದ ಮಾತುಗಳಿಗೆ ತದ್ವಿರುದ್ಧವಾಗಿ ಮಾತನಾಡುತ್ತಿದ್ದಾರೆ. ಆದರೆ ಸಾರ್ವಜನಿಕರಿಂದ ಯಾವುದೂ ಮುಚ್ಚುಮರೆ ಮಾಡಲು ಸಾಧ್ಯವಿಲ್ಲ. ದೇಶವು ಅವರ ಹಳೆಯ ಹೇಳಿಕೆಗಳನ್ನು ಮತ್ತು ಇಂದು ಅವರ ನಿಜವಾದ ಮುಖ ಎರಡನ್ನೂ ನೋಡುತ್ತಿದೆ.

ಈ ಜನರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಸರ್ಕಾರಕ್ಕೆ ಹಾನಿ ಮಾಡಬಹುದೆಂದು ಯೋಚಿಸುತ್ತಿದ್ದಾರೆ. ಆದರೆ ಸತ್ಯವೇನೆಂದರೆ ನೀವು ಅವರ ಗುರಿಯಲ್ಲಿದ್ದೀರಿ, ದೇಶದ ರೈತರು, ದೇಶದ ಯುವಕರು ಅವರ ಗುರಿಯಲ್ಲಿದ್ದಾರೆ. ಈ ಜನರು ಮುಗ್ಧ ರೈತರನ್ನು ರಾಜಕೀಯದ ಕೈಗೊಂಬೆಗಳನ್ನಾಗಿ ಮಾಡಲು ಪ್ರಯತ್ನಿಸಿದ್ದಾರೆ.

ಯಾವ ಕಾಂಗ್ರೆಸ್ ತನ್ನ ಸರ್ಕಾರದ ಅವಧಿಯಲ್ಲಿ ಸ್ವಾಮಿನಾಥನ್ ಕಮಿಟಿ ವರದಿಯನ್ನು 8 ವರ್ಷಗಳವರೆಗೆ ಹಾಗೇ ಇಟ್ಟುಕೊಂಡು ಕುಳಿತ್ತಿತ್ತೋ, ಆ ಕಾಂಗ್ರೆಸ್ ರೈತರ ಹಿತೈಷಿಯಾಗಲು ಹೇಗೆ ಸಾಧ್ಯ?

ಯಾವ ಕಾಂಗ್ರೆಸ್, ತನ್ನ ಪ್ರಣಾಳಿಕೆಯಲ್ಲಿ ಕೃಷಿ ಮಂಡಿ ಹೊರತಾಗಿಯೂ ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಆಯ್ಕೆಗಳಿರಬೇಕು ಎಂದು ಹೇಳುತ್ತಿತ್ತೋ, ಅದೇ ಕಾಂಗ್ರೆಸ್ ಈಗೇಕೆ ರೈತರು ಸದಾ ನಿರ್ಬಂಧಗಳಲ್ಲಿ ಇರುವುದನ್ನು ನೋಡಬೇಕೆಂದು ಬಯಸುತ್ತಿದೆ. ಇದೇ ಸುಧಾರಣೆಗಳ ಪರವಾಗಿ ಪತ್ರಗಳನ್ನು ಬರೆಯುತ್ತಿದ್ದ ಯುಪಿಎ ಸರ್ಕಾರದ ಕೃಷಿ ಸಚಿವರು ಈಗೇಕೆ ಇದನ್ನು ವಿರೋಧಿಸುತ್ತಿದ್ದಾರೆ?

ಯಾವ ಆಮ್ ಆದ್ಮಿ ಪಕ್ಷ ಪಂಜಾಬ್ ಚುನಾವಣೆಯ ಸಮಯದಲ್ಲಿ ರೈತರಿಗೆ ಮಂಡಿಯ ಹೊರಗೂ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ನೀಡುತ್ತೇವೆ ಎಂದು ತನ್ನ ಪ್ರಣಾಳಿಕೆಯಲ್ಲಿ ಹೇಳಿತ್ತೋ, ಈಗೇಕೆ ತದ್ವಿರುದ್ಧವಾಗಿ ಮಾತನಾಡುತ್ತಿದೆ ?

ಹುಡ್ಡಾ ಸಮಿತಿಯು ಕೃಷಿ ಸುಧಾರಣೆಗಳ ಬಗ್ಗೆ ಹೇಳಿತ್ತು. ಆ ಸಮಿತಿಯಲ್ಲಿ ಅಕಾಲಿ ದಳದ ದೊಡ್ಡ ನಾಯಕರು ಕೂಡ ಇದ್ದರು. ಆದರೆ ಇಂದು ಏಕೆ ಅವರು ಬೇರೆ ಸ್ವರದಲ್ಲಿ ಮಾತನಾಡುತ್ತಿದ್ದಾರೆ.

ಎರಡು-ಮೂರು ತಿಂಗಳ ಹಿಂದಿನವರೆಗೂ ಈ ಸುಧಾರಣೆಗಳನ್ನು ಬೆಂಬಲಿಸುತ್ತಿದ್ದ, ನಮ್ಮ ಸರ್ಕಾರವನ್ನು ಅಭಿನಂದಿಸುತ್ತಿದ್ದ ರೈತ ಸಂಘಟನೆಗಳು ಈಗ ಇದ್ದಕ್ಕಿದ್ದಂತೆ ಏಕೆ ಪ್ರತಿಭಟಿಸುತ್ತಿವೆ?

**ನನ್ನ ರೈತ ಸಹೋದರ ಮತ್ತು ಸಹೋದರಿಯರೇ,**

ಅನೇಕ ದಶಕಗಳಿಂದ ನಮ್ಮ ದೇಶದಲ್ಲಿ ಕೇವಲ ಘೋಷಣೆಗಳನ್ನು ಮಾಡುತ್ತ ವೋಟ್ ಪಡೆಯುವ ರಾಜಕೀಯ ನಡೆದಿದೆ. ಘೋಷಣೆ ಮಾಡಿ, ಪ್ರಾಮಾಣಿಕತೆಯಿಂದ ಅದನ್ನು ಪೂರೈಸುವ ಸರ್ಕಾರವನ್ನು ದೇಶ ಈಗ ನೋಡುತ್ತಿದೆ.

ನಮ್ಮ ಮೇಲೆ ದೇಶದ ಜನರ ಆಶೀರ್ವಾದ ಹೆಚ್ಚುತ್ತಿರುವುದನ್ನು ನೋಡಿ, ಕೆಲವು ಪಕ್ಷಗಳು ರೈತರಲ್ಲಿ ಗೊಂದಲವನ್ನು ಹರಡುವ ಮೂಲಕ ಕಳೆದು ಹೋದ ತಮ್ಮ ರಾಜಕೀಯ ನೆಲೆಯನ್ನು ಮರಳಿ ಪಡೆಯಬಹುದೆಂದು ಭಾವಿಸುತ್ತಿವೆ.

ಈ ಗೊಂದಲವನ್ನು ನಿವಾರಿಸುವುದು ನಮ್ಮ ಜವಾಬ್ದಾರಿಯಾಗಿದೆ. ಆದ್ದರಿಂದ, ನಾವು ಆಂದೋಲನ ನಡೆಸುತ್ತಿರುವ ರೈತರೊಂದಿಗೆ ಪ್ರತಿಯೊಂದು ಸಮಸ್ಯೆಯನ್ನು ಪರಿಹರಿಸಲು ನಿರಂತರವಾಗಿ ಪ್ರಯತ್ನಿಸುತ್ತಿದ್ದೇವೆ. ಆದರೆ, ರೈತರ ಹಿತಾಸಕ್ತಿಯ ಕಾಳಜಿ ಹೊಂದಿರದ ಜನರು ಕೂಡ ಆಂದೋಲನದಲ್ಲಿ ಸೇರಿಕೊಂಡಿದ್ದು ಅಂತಹ ಜನರ ಬಗ್ಗೆ ನೀವು ಜಾಗರೂಕರಾಗಿರಬೇಕು. ಕಳೆದ ಆರು ವರ್ಷಗಳಲ್ಲಿ, ಒಂದೇ ಸಮೂಹದ, ಒಂದೇ ಆಚಾರ-ವಿಚಾರದ ಜನರು, ಕೆಲವೊಮ್ಮೆ ವಿದ್ಯಾರ್ಥಿಗಳು, ಕೆಲವೊಮ್ಮೆ ದಲಿತ ಸಮಾಜ, ಕೆಲವೊಮ್ಮೆ ಮಹಿಳೆಯರು ಅಥವಾ ಅಲ್ಪಸಂಖ್ಯಾತರು - ಹೀಗೆ ವಿವಿಧ ವರ್ಗಗಳ ಹಿಂದೆ ಅವಿತುಕೊಂಡು ಸಮಾಜದಲ್ಲಿ ಅಸಮಾಧಾನ ಮತ್ತು ದೇಶದಲ್ಲಿ ಅರಾಜಕತೆಯ ವಾತಾವರಣವನ್ನು ಹರಡಲು ಪ್ರಯತ್ನಿಸುತ್ತಿರುವುದನ್ನು ನಾವು ನೋಡಿದ್ದೇವೆ.

ಇಂದು ಇದೇ ಜನರು ಮತ್ತೊಮ್ಮೆ ಅನ್ನದಾತರ ಹಿಂದೆ ಅವಿತುಕೊಂಡು ರಾಜಕೀಯ ಸ್ವಾರ್ಥಕ್ಕಾಗಿ ಹಿಂಸೆ ಮತ್ತು ಅರಾಜಕತೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉತ್ತೇಜನ ನೀಡುತ್ತಿದ್ದಾರೆ.

ಈ ಜನರು ದೇಶದ ಅನ್ನದಾತರ ಹಿಂದೆ ಅವಿತುಕೊಂಡು ಗಲಭೆಯ ಆರೋಪಿಗಳನ್ನು, ಹಿಂಸೆ ಹಬ್ಬಿಸಿದ ಆರೋಪಿಗಳನ್ನು ತಕ್ಷಣ ಬಿಡುಗಡೆ ಮಾಡುವಂತೆ ಒತ್ತಡ ಹೇರುತ್ತಿದ್ದಾರೆ.

ಈ ಜನರು ದೇಶದ ಅನ್ನದಾತರ ಹಿಂದೆ ಅವಿತುಕೊಂಡು ಗಾಂಧೀಜಿ ಪ್ರತಿಮೆಗೆ ಧಕ್ಕೆ ಮಾಡುತ್ತಾರೆ. ಯಾವ ಬಾಪು ಚಂಪಾರಣ್‌ನಲ್ಲಿ ರೈತರಿಗಾಗಿ ಸತ್ಯಾಗ್ರಹದ ದೊಡ್ಡ ಆಂದೋಲನವನ್ನು ಪ್ರಾರಂಭಿಸಿದ್ದರೋ ಅದೇ ಪೂಜ್ಯ ಬಾಪುವಿಗೆ ಅಪಮಾನ ಮಾಡುತ್ತಿದ್ದಾರೆ.

ನೀರಾವರಿಯ ನೀರು ರೈತರಿಗೆ ತಲುಪಬಾರದು ಎಂಬ ಸಲುವಾಗಿ, ಈ ಸಂಘಟನೆಗಳು ವರ್ಷಗಳಿಂದ ಎಲ್ಲ ರೀತಿಯ ಪ್ರಯತ್ನಗಳನ್ನೂ ಮಾಡಿವೆ. ಕಾನೂನಿನ ಎಲ್ಲ ತಂತ್ರ ಪ್ರತಿ ತಂತ್ರಗಳನ್ನು ಬಲವಾಗಿ ಹೂಡುತ್ತ ಬಂದಿವೆ. ಈ ಜನರು ವರ್ಷಗಳಿಂದ ರೈತರಿಗೆ ವಿದ್ಯುತ್ ಒದಗಿಸುವ ಮತ್ತು ಅಣೆಕಟ್ಟುಗಳ ನಿರ್ಮಾಣದಲ್ಲಿ ಅಡೆತಡೆಗಳನ್ನು ಮಾಡುತ್ತಲೇ ಇದ್ದಾರೆ. ಇಂತಹ ಜನರು ಇಂದು ರೈತರ ಹಿತೈಷಿಗಳೆಂಬ ಕಪಟ ನಾಟಕವಾಡುತ್ತಿದ್ದಾರೆ.

ದೇಶ ಇಂದು ಆತ್ಮನಿರ್ಭರ ಭಾರತ ಎಂಬ ಸಂಕಲ್ಪದೊಂದಿಗೆ ಮುನ್ನಡೆಯುತ್ತಿದೆ, ವೋಕಲ್ ಫಾರ್ ಲೋಕಲ್‌ಗೆ ಧ್ವನಿಯಾಗುತ್ತಿರುವಾಗ, ಭಾರತದ ಉತ್ಪನ್ನಗಳನ್ನು ಬಹಿಷ್ಕರಿಸುವುದಾಗಿ ಘೋಷಿಸುವ ಈ ಜನರ ಉದ್ದೇಶಗಳನ್ನು ಅರಿಯಬೇಕಾಗಿದೆ.

ಲೇಹ್-ಲಡಾಕ್‌ನಲ್ಲಿನ ಗಡಿಯಲ್ಲಿ ಭದ್ರತಾ ಸವಾಲುಗಳು ಹೆಚ್ಚಾಗಿರುವಾಗ, ಹಲವು ಅಡಿ ಎತ್ತರ ಹಿಮಪಾತವಾಗಿರುವಾಗ, ಸೈನಿಕರಿಗೆ ಪಡಿತರ, ಅಗತ್ಯ ವಸ್ತುಗಳನ್ನು ಸಾಗಿಸುವ ರೈಲುಗಳನ್ನು ತಡೆಯುವ ಈ ಜನರು ರೈತರಾಗಿರಲು ಸಾಧ್ಯವಿಲ್ಲ.

ಈ ಜನರ ಕಾರಣದಿಂದಾಗಿ, ನಾವು ನಮ್ಮ ಸೈನಿಕರಿಗೆ ಬೇಕಾದ ಪಡಿತರ ಹಾಗೂ ಇತರ ಅಗತ್ಯ ವಸ್ತುಗಳನ್ನು ವಾಯು ಮಾರ್ಗ ಹಾಗೂ ಇತರ ಮಾರ್ಗಗಳಿಂದ ತಲುಪಿಸಬೇಕಾಗಿದೆ. ಸಾರ್ವಜನಿಕರು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಈ ಪರ್ಯಾಯ ವ್ಯವಸ್ಥೆಗಳಿಗಾಗಿ ವ್ಯಯ ಮಾಡಬೇಕಾಗಿದೆ.

ತೆರೆಮರೆಯಲ್ಲಿ ಅವಿತುಕೊಂಡು ರೈತರನ್ನು ದಿಕ್ಕು ತಪ್ಪಿಸುತ್ತಿರುವ ಈ ಜನರ ಸಿದ್ಧಾಂತವು 1962 ರ ಯುದ್ಧದ ಸಂದರ್ಭದಲ್ಲೂ ದೇಶದ ಜೊತೆ ಇರಲಿಲ್ಲ.

ಇಂದು ಈ ಜನ ಮತ್ತೆ 1962 ರ ಭಾಷೆಯನ್ನು ಮಾತನಾಡುತ್ತಿದ್ದಾರೆ.

ಈ ಜನರು ತಮ್ಮ ದುರುದ್ದೇಶಪೂರಿತ ಉದ್ದೇಶಗಳು ಮತ್ತು ಒಳಸಂಚುಗಳಿಂದ ರೈತರ ಮನಸ್ಸಿನ ಪಾವಿತ್ರ್ಯತೆಯನ್ನು ಅಪವಿತ್ರ ಮತ್ತು ಕಲುಷಿತಗೊಳಿಸಲು ಪ್ರಯತ್ನಿಸಿದ್ದಾರೆ.

ಆಂದೋಲನವನ್ನು ಪ್ರಾರಂಭಿಸುವಾಗ ಅವರ ಗುರಿ ಏನಾಗಿತ್ತು ಮತ್ತು ಇಂದು ಏನೇನು ಮಾತುಗಳು ಅಲ್ಲಿ ಕೇಳಿಬರುತ್ತಿವೆ ಎಂಬುದರ ಕುರಿತು ನಮ್ಮ ರೈತ ಸಹೋದರ ಸಹೋದರಿಯರು ಚಿಂತನೆ ನಡೆಸಬೇಕಾಗಿದೆ.

ಯಾವುದೇ ಪ್ರಚೋದನೆಗೊಳಗಾಗದೆ, ಸತ್ಯದ ಆಧಾರದ ಮೇಲೆ ಚಿಂತನ-ಮಂಥನ ಮಾಡಬೇಕೆಂದು ನಾನು ಈ ಪತ್ರದ ಮೂಲಕ ರೈತರಲ್ಲಿ ಕೈಜೋಡಿಸಿ ವಿನಂತಿಸಿಕೊಳ್ಳುತ್ತೇನೆ.

ನಿಮ್ಮ ಎಲ್ಲಾ ಅನುಮಾನಗಳನ್ನು ಮತ್ತು ಆತಂಕಗಳನ್ನು ದೂರ ಮಾಡುವುದು ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ. ನಾವು ಈ ಜವಾಬ್ದಾರಿಯಿಂದ ಹಿಂದೆ ಸರಿದಿಲ್ಲ ಮತ್ತು ಹಿಂದೆ ಸರಿಯುವುದೂ ಇಲ್ಲ.

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್' ಎಂಬ ಧ್ಯೇಯ ಮಂತ್ರದೊಂದಿಗೆ ಸಾಗುತ್ತ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಮ್ಮ ಸರ್ಕಾರ ಯಾವುದೇ ತಾರತಮ್ಯವಿಲ್ಲದೆ ಎಲ್ಲರ ಹಿತಕ್ಕಾಗಿ ಪ್ರಯತ್ನಿಸಿದೆ. ಕಳೆದ 6 ವರ್ಷಗಳ ಇತಿಹಾಸ ಇದಕ್ಕೆ ಸಾಕ್ಷಿಯಾಗಿದೆ.

ನೀವು ವಿಶ್ವಾಸವಿಡಿ. ರೈತರ ಹಿತದೃಷ್ಟಿಯಿಂದ ಮಾಡಲಾಗಿರುವ ಈ ಸುಧಾರಣೆಗಳು ಭಾರತೀಯ ಕೃಷಿಯಲ್ಲಿ ಹೊಸ ಅಧ್ಯಾಯದ ಅಡಿಪಾಯವಾಗಲಿವೆ, ದೇಶದ ರೈತರನ್ನು ಹೆಚ್ಚು ಸ್ವತಂತ್ರವಾಗಿಸಲಿವೆ, ಸಶಕ್ತಗೊಳಿಸಲಿವೆ.

ಈ ಕೃಷಿ ಸುಧಾರಣೆಗಳ ಶಕ್ತಿಯೊಂದಿಗೆ, ನಾವು ಒಟ್ಟಾಗಿ ಭಾರತದ ಕೃಷಿಯನ್ನು ಸಮೃದ್ಧಗೊಳಿಸೋಣ, ಸಂಪನ್ನಗೊಳಿಸೋಣ.

ನಿಮ್ಮವನೇ ಆದ,

17/12/20

**ನರೇಂದ್ರ ಸಿಂಗ್ ತೋಮರ್**

## ಅನ್ನದಾತರಿಗೆ ಆಶ್ವಾಸನೆ

- ಕನಿಷ್ಟ ಬೆಂಬಲ ಬೆಲೆ (MSP) ಬಗ್ಗೆ ಲಿಖಿತ ಭರವಸೆ ನೀಡಲು ಸರ್ಕಾರ ಸಿದ್ಧವಿದೆ.
- ಎಪಿಎಂಸಿ ಹೊರಗೆ ಖಾಸಗಿ ಮಾರುಕಟ್ಟೆಗಳಲ್ಲಿ ರಾಜ್ಯಗಳಿಗೆ ಸುಂಕ ವಿಧಿಸಲು ಅನುಮತಿ ನೀಡಬಹುದಾಗಿದೆ.
- ಯಾವುದೇ ತರಹದ ವಿವಾದಗಳನ್ನು ಬಗೆಹರಿಸಲು ರೈತರಿಗೆ ನ್ಯಾಯಾಲಯಕ್ಕೆ ಹೋಗುವ ಅವಕಾಶ ಇರಲಿದೆ.
- ರಾಜ್ಯಗಳಿಗೆ ಕೃಷಿ ಒಪ್ಪಂದಗಳನ್ನು ನೋಂದಣಿ ಮಾಡಿಕೊಳ್ಳುವ ಅಧಿಕಾರವಿರುತ್ತದೆ.
- ಯಾರು ಕೂಡ ರೈತರ ಜಮೀನನ್ನು ಆಕ್ರಮಿಸಿಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ ಈ ಕಾನೂನು ರೈತರ ಭೂಮಿಯನ್ನು ಯಾವುದೇ ರೀತಿಯಲ್ಲಿ ವರ್ಗಾವಣೆ, ಮಾರಾಟ, ಗುತ್ತಿಗೆ ಅಥವಾ ಅಡವು ಇಡಲು ಅನುಮತಿ ನೀಡುವುದಿಲ್ಲ.
- ಗುತ್ತಿಗೆದಾರರು ರೈತರ ಭೂಮಿಯಲ್ಲಿ ಯಾವುದೇ ಶಾಶ್ವತ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲ.
- ರೈತರ ಭೂಮಿಯಲ್ಲಿ ಯಾವುದೇ ತಾತ್ಕಾಲಿಕ ನಿರ್ಮಾಣಕ್ಕಾಗಿ ಗುತ್ತಿಗೆದಾರರಿಗೆ ಸಾಲ ನೀಡಲು ಸಾಧ್ಯವಿಲ್ಲ.
- ಪರಿಸ್ಥಿತಿ ಏನೇ ಇದ್ದರೂ, ರೈತರ ಜಮೀನನ್ನು ಯಾವುದೇ ಕಾರಣಕ್ಕೂ ಜಪ್ತಿ ಮಾಡುವ ಯಾವುದೇ ಪ್ರಕ್ರಿಯೆಯನ್ನು ಕಾನೂನು ಅನುಮತಿಸುವುದಿಲ್ಲ.